ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 11.04.2023
ಪಾಟಿ ಸವಾಲು : ಆರೋಪಿ ಪರ ವಕೀಲರಿಂದ

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹಾಗೂ ಪಿರ್ಯಾದುವಿನಲ್ಲಿ ನಾನು ವ್ಯವಸಾಯ ಮಾಡುತ್ತೇನೆಂದು ತಿಳಿಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ವ್ಯಾಪಾರ ಮತ್ತು ವ್ಯವಹಾರ ಮಾಡುತ್ತೇನೆಂದು ತಿಳಿಸಿದ್ದೇನೆ ಎಂದರೆ ಸರಿ. ನಾನು ಯಾವುದೇ ವ್ಯಾಪಾರ ಮತ್ತು ವ್ಯವಹಾರ ಮಾಡುವುದಿಲ್ಲ ಬದಲಾಗಿ ವ್ಯವಸಾಯ ಮಾಡುತ್ತೇನೆ.

ನಾನು ಸರ್ಕಾರಕ್ಕೆ ತೆರಿಗೆ ಕಟ್ಟುವುದಿಲ್ಲ. ಇದೇ ನ್ಯಾಯಾಲಯದಲ್ಲಿ ನಾನು ಉದಯಕುಮಾರ್ ಎನ್ನುವವರ ಮೇಲೆ ಸಿಸಿ.353/2019 ರಂತೆ ಕೇಸು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಕೇಸು ದಿಃ 06.12.2022 ರಂದು ವಜಾ ಆಗಿದೆ ಎಂದರೆ ಸರಿ. ಸದರಿ ಕೇಸನ್ನು ಅದರಲ್ಲಿನ ಆರೋಪಿ ನನಗೆ ರೂ.2 ಲಕ್ಷ ಕೊಡಬೇಕೆಂದು ಹಾಕಲಾಗಿತ್ತು ಎಂದರೆ ಸರಿ.

ಈ ಕೇಸಿನಲ್ಲಿ ಆರೋಪಿ ರೂ.1,50,000/- ಗಳನ್ನು ಶೇ.2 ಪರ್ಸೆಂಟ್ ಬಡ್ಡಿಗಾಗಿ ನನ್ನಿಂದ ಸಾಲವಾಗಿ ಪಡೆದುಕೊಂಡಿದ್ದನು ಎಂದು ತಿಳಿಸಿದ್ದೇನು ಎಂದರೆ ಸರಿ. ದಿಃ22.01.2015 ರಂದು ನಾನು ಸಾಲ ಕೊಟ್ಟಾಗ ಆರೋಪಿಯಿಂದ ಯಾವುದೇ ದಾಖಲೆ ಪಡೆದಿರಲಿಲ್ಲ. ನಾನು ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೇನು.

ಉದಯಕುಮಾರ್ ಹಾಗೂ ಈ ಕೇಸಿನ ಆರೋಪಿ ನಮ್ಮ ಊರಿನವರೇ ಎಂದರೆ ಸರಿ. ಉದಯಕುಮಾರ್ ಹಾಗೂ ಆರೋಪಿ ನನಗೆ ಸ್ನೇಹಿತರು ಎಂದರೆ ಸರಿ.

ನಾನು ವ್ಯವಸಾಯ ಮಾಡುವ ಸಂಬಂಧ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹಾಗೂ ಪಿರ್ಯಾದುವಿನಲ್ಲಿ ನಾನು ಹೊಂದಿಸಿದ ಹಣದ ಮೂಲವನ್ನು ನಮೂದಿಸಿಲ್ಲ. ನಿಪಿ.1 ಮತ್ತು ನಿಪಿ.5 ರಲ್ಲಿರುವ ಬರವಣಿಗೆ ಒಂದೇ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 5 ದಾಖಲೆಯನ್ನು ಈ ಕೇಸಿನ ಸಲುವಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಬೇಕರಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಆರೋಪಿ ಪ್ರತಿದಿನ ರೂ.5,000-10,000/- ಸಂಪಾದನೆ ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಹಣದ ಅವಶ್ಯಕತೆ ಇಲ್ಲ ಆದರೂ ಕೂಡ ಆರೋಪಿ ಮೇಲೆ ಜಿದ್ದು ಸಾಧಿಸುವ ಉದ್ದೇಶದಿಂದ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಸೊಸೈಟಿಯಿಂದ ರೇಷನ್ ಕಾರ್ಡ್ ಮುಖಾಂತರ ಪಡಿತರ ಪಡೆಯುತ್ತೇನೆ ಎಂದರೆ ಸರಿ. ನಾನು ಬಿ.ಪಿ.ಎಲ್ ಕಾರ್ಡ್ ಹೊಂದಿದ್ದೇನೆ ಎಂದರೆ ಸರಿ. ಬಿ.ಪಿ.ಎಲ್. ಕಾರ್ಡ್ ಮುಖಾಂತರ ಪಡಿತರ ಪಡೆಯುವವರು ಕಡುಬಡವರು ಎಂದರೆಸರಿ. ನನಗೆ ಆರೋಪಿಗೆ ರೂ.1,50,000/- ಹಣ ಕೊಡುವಷ್ಟು ಸಾಮರ್ಥ್ಯ ಇಲ್ಲವೆಂದರೆ ಸರಿಯಲ್ಲ. ನಾನು ನನ್ನ ಆದಾಯ ಮೂಲಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.